ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ

ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 324-2012

............................ ವಿರುದ್ಧ .............................

PW 04
CW 07

ಸಾಕ್ಷಿಯ ಹೆಸರು : ಲಕ್ಷ್ಮಣ ನಾಗು ಮಿರಾಸಿ

ತಂದೆಯ ಹೆಸರು : ನಾಗು ಮಿರಾಸಿ

ವಯಸ್ಸು : 67 ವರ್ಷ

ಉದ್ಯೋಗ : ವ್ಯವಸಾಯ

ವಾಸ್ತವ್ಯ : ಚಾಪೇರಿ, ತಾಃ ಜೋಯಿಡಾ.

ದಿನಾಂಕಃ 26-02-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಮೂರು ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ 1 ರಿಂದ 3 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಡಿ ಯಿಂದ 3 ಡಿ ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು 13 ವರ್ಷಗಳ ಹಿಂದೆ ಗುಂದಾ ವಲಯ ಅರಣ್ಯಾಧಿಕಾರಿಯ ಕಚೇರಿಯಲ್ಲಿ ಮಾಡಿರುತ್ತೇನೆ. ನನ್ನೊಂದಿಗೆ ಚಾಸಾ 6 ರವರು ಸಹ ಸಹಿ ಮಾಡಿರುತ್ತಾರೆ. ಸದ್ರಿ ಸಹಿಯನ್ನು ಚಾಸಾ. 8 ರವರ ಹೇಳಿಕೆಯ ಮೇರೆಗೆ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಯಾವ ಸಮಯದಲ್ಲಿ ಪಂಚನಾಮೆ ಮಾಡಲಾಗಿತ್ತು ಎಂದು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಎ.ಪಿ.ಪಿ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಎ.ಪಿ.ಪಿ. ರವರಿಂದ**

1. **ಈ ಮೇಲೆ ಹೇಳಿದ ಸಹಿಯನ್ನು ದಿಃ 26-09-2010 ರಂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.** ದಿನಾಂಕಃ 25-09-2010 ರಂದು ಅರಣ್ಯ ಇಲಾಖೆಯ ಸಿಬ್ಬಂದಿಗಳು ನನ್ನನ್ನು ಹಾಗೂ ಚಾಸಾ 6 ರವರನ್ನು ಕರೆದುಕೊಂಡು ಗುಂದ ಗ್ರಾಮದ ಜನತಾ ಪ್ಲಾಟನಲ್ಲಿರುವ 5 ನೇ ಆರೋಪಿಯ ಮನೆಗೆ ಹೋಗಿ, ಅವರ ಮನೆಯಲ್ಲಿ ವಿಚಾರಿಸಿದಾಗ ಆರೋಪಿಯ ಪತ್ನಿ ಆರೋಪಿಯು ಸ್ನಾನ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮನೆಯನ್ನು ಸುತ್ತು ವರೆದಾಗ 5 ನೇ ಆರೋಪಿ ಪಾತ್ರೆಯ ಸಮೇತ ಓಡಿ ಹೋಗುತ್ತಿದ್ದವನು ನಮ್ಮನ್ನು ನೋಡಿ ಪಾತ್ರೆಯನ್ನು ಎಸೆದು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ಸದ್ರಿ ಪಾತ್ರೆಯನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ ಕುದಿಸಿದ ಹಸಿ ಮಾಂಸ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಸದ್ರಿ ಮಾಂಸವನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅದನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಅರಗು ಮತ್ತು ಸೀಲ್‌ನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ. ನಂತರ ಅವರ ಮನೆಯನ್ನು ಶೋಧನೆ ಮಾಡಿ ನೋಡಲಾಗಿ, ಒಂದು ಪಾತ್ರೆಯಲ್ಲಿ ಸಾಂಬಾರ ಮಾಡಿದ ಮಾಂಸ ಕಂಡ ಬಂದಿರುತ್ತದೆ ಎಂದರೆ ಸರಿಯಲ್ಲ. ಅದನ್ನು ಕೂಡ ನಮ್ಮ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅದನ್ನು ಪಾತ್ರೆಯ ಸಮೇತ ಮಾಂಸವನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ಹಾಕಿ ಅರಗು ಮತ್ತು ಸೀಲ್‌ನ್ನು ಹಾಕಿರು ತ್ತಾರೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಸಿಬ್ಬಂದಿ ಹಾಗೂ ಪಂಚರು ಸೇರಿಕೊಂಡು ಇಲಾಖೆ ವಾಹನ ಸಂಃ ಕೆಎ- 31- ಜಿ- 128 ರಲ್ಲಿ ನಂದಿಗದ್ದೆಯ 2 ನೇ ಆರೋಪಿತನ ಮನೆಗೆ ಹೋಗಿ ಅವರಿಗೆ ವಿಷಯವನ್ನು ತಿಳಿಸಿ ಮನೆಯನ್ನು ಶೋಧನೆ ಮಾಡುತ್ತಿ್ತರುವಾಗ ಯಾರೋ ಒಬ್ಬ ವ್ಯಕ್ತಿ ಓಡಿ ಬರುತ್ತಿರುವುದನ್ನು ನೋಡಿ ನಮ್ಮ ಸಿಬ್ಬಂದಿಯವರು ಹಿಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆತನನ್ನು ವಿಚಾರಿಸಲಾಗಿ ಆತನು ತನ್ನ ಹೆಸರು, ವಿಳಾಸವನ್ನು ತಿಳಿಸಿ ತೋಟದಲ್ಲಿ ಇದ್ದ ಮಾಂಸವನ್ನು ಹೊಂಡದಲ್ಲಿ ಮುಚ್ಚಿಟ್ಟಿರುವುದಾಗಿ ತಿಳಿಸಿ, ನಮ್ಮನ್ನು ಹಾಗೂ ಪಂಚರನ್ನು ಮಾಂಸವನ್ನು ಮುಚ್ಚಿಟ್ಟ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ

ಮಾಂಸದ ತುಂಡುಗಳನ್ನು ಚೆಲ್ಲಾ-ಪಿಲ್ಲಿಯಾಗಿ ಬಿದ್ದಿದವು ಎಂದರೆ ಸರಿಯಲ್ಲ. ಹಾಗೂ ಪಕ್ಕದಲ್ಲಿ ಸ್ಟೀಲ್ ಡಬ್ಬಿ ಬಿದ್ದಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಅದನ್ನು ತೆರೆದು ನೋಡಲಾಗಿ ಸುಳ್ಳು ಮಾಂಸ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸುಟ್ಟು ಮಾಂಸ ಹಾಗೂ ಚೆಲ್ಲಾ ಪಿಲ್ಲಿಯಾಗಿ ಬಿದ್ದಿದ್ದ ಮಾಂಸವನ್ನು ಸ್ಟೀಲ್ ಡಬ್ಬಿ ಸಮೇತ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು, ಅವುಗಳನ್ನು ಪ್ರತ್ಯೆಕವಾಗಿ ಬಿಳಿ ಬಟ್ಟೆಗಳಲ್ಲಿ ಹಾಕಿ ಅರಗು ಸೀಲ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪ್ರಕರಣದಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ ಎಂದು ಆತನನ್ನು ವಿಚಾರಿಸಲಾಗಿ, ಆತನು ತನ್ನ ಜೊತೆ 3 ನೇ ಆರೋಪಿ ಭಾಗವಹಿಸಿದ್ದು, ಅವನು ತನ್ನ ಮನೆಯಲ್ಲಿ ಅಡಗಿ ಕುಳಿತಿದ್ದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಆತನ ಮನೆಗೆ ಹೋಗಿ ಆತನನ್ನು ವಶಕ್ಕೆ ಪಡದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ನಂತರ ವಶಕ್ಕೆ ಪಡಿಸಿಕೊಂಡ ಎಲ್ಲಾ ಆರೋಪಿಗಳನ್ನು ವಲಯ ಅರಣ್ಯಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋಗಿ ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ಹಾಗೂ ಸಿಬ್ಬಂದಿಗಳು ಸೇರಿಕೊಂಡು 6 ನೇ ಆರೋಪಿಯು ಮನೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಅವರಿಗೆ ವಿಚಾರವನ್ನು ತಿಳಿಸಿದಾಗ 6 ನೇ ಆರೋಪಿ ಮನೆಯಲ್ಲಿ ಇಲ್ಲದಿರವುದನ್ನು ಅವರ ಪತ್ನಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ವಾಹನ ಬೀಗವನ್ನು ಕೇಳಲಾಗಿ ಅದು ಕೂಡ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಮ್ಮ ಜೀಪ ಬೀಗದ ಕೈಯನ್ನು ತೆಗೆದು ನೋಡಿದಾಗ ಅದರಲ್ಲಿ ಪ್ರಾಣಿಯ ಕೂದಲು ಹಾಗೂ ಚರ್ಮದ ತುಂಡುಗಳು ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಅವುಗಳನ್ನು ನಮ್ಮ ಸಮಕ್ಷಮ ವಶಕ್ಕೆ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾವು ವಾಹನದ ಜೊತೆಗೆ ವಾಹನದಲ್ಲಿದ್ದ ಸ್ಟೇಪಣಿ, ಜ್ಯಾಗ್ ಲೀವರ್, ವೀಲ್ ಪಾನ್, ನೆಟ್ ಬೋಟ ಹಾಗೂ ಸೌಂಡ್ ಬಾಕ್ಸಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ವಾನದಲ್ಲಿದ್ದ ಪ್ರಾಣಿಯ ಕೂದಲು ಹಾಗೂ ಚರ್ಮವನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ಹರ್ನೊಲಿ ಗ್ರಾಮದ 1 ನೇ ಆರೋಪಿ ಮನೆಗೆ ಹೋಗಿ, ಅಲ್ಲಿ ಪ್ರಕರಣದ

ವಿಷಯವನ್ನು ತಿಳಿಸಲಾಗಿ, ಆತನು ಕೃತ್ಯ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ಆತನನ್ನು ವಶಕ್ಕೆ ಪಡೆದುಕೊಂಡು, ವಲಯ ಕಚೇರಿಗೆ ತಂದಿರು ತ್ತಾರೆ ಎಂದರೆ ಸರಿಯಲ್ಲ.

4. ನಂತರ ಸಂಜೆ 6-30 ಗಂಟೆಯಿಂದ ರಾತ್ರಿ 10-00 ಗಂಟೆಯವರೆಗೆ ಪಂಚನಾಮೆಯನ್ನು ತಯಾರಿಸಿರು ತ್ತಾರೆ ಎಂದರೆ ಸರಿಯಲ್ಲ. ಮರದಿನ ನಾವು, ಸಿಬ್ಬಂದಿಗಳು ಹಾಗೂ 2 ನೇ ಆರೋಪಿನೊಂದಿಗೆ, 1 ನೇ ಆರೋಪಿಯ ಮನೆಗೆ ಹೋಗಿ, ಆತನು ತೋರಿಸಿ ಕೊಟ್ಟ ಕಾಡು ಕೋಣ ಬೇಟೆಯಾಡಿದ ಜಾಗವನ್ನು ಪರಿಶೀಲನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಅಲ್ಲಿಯೇ ಸಮೀಪದಲ್ಲಿ ಕಾಡುಕೋಣವನ್ನು ಹೂತ ಹಾಕಿದ ಸ್ಥಳವನ್ನು ತೋರಿಸಿದ್ದು, ಅದನ್ನು ಅಗೆದು ನೋಡಲಾಗಿ ಕಾಡು ಕೋಣದ ಕಾಲುಗಳು ಹಾಗೂ ಸ್ವಲ್ಪ ದೇಹದ ಭಾಗ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಉಳಿದ ಭಾಗದ ಬಗ್ಗೆ ವಿಚಾರಿಸಿದಾಗ ಅಲ್ಲಿ 15 -20 ಮೀಟರ ದೂರದಲ್ಲಿ ಇನ್ನೊಂದು ಹೂತಿಟ್ಟ ಜಾಗವನ್ನು ತೋರಿಸಿದ್ದು, ಅದನ್ನು ಅಗೆದು ನೋಡಲಾಗಿ ಅದರಲ್ಲಿ ಕಾಡುಕೋಣದ ಹೊಟ್ಟೆ ಭಾಗ, ಚರ್ಮ, ಹಾಗೂ ಉಳಿದ ಮಾಂಸ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿಯನ್ನು ಕಾಡುಕೋಣದ ತಲೆಯ ಬಗ್ಗೆ ವಿಚಾರಸಿದಾಗ, 2 ನೇ ಆರೋಪಿಯು ಸದ್ರಿ ತಲೆಯು 1 ನೇ ಅರೋಪಿಗೆ ಬೇಕಾಗಿದ್ದರಿಂದ, ಅಲ್ಲೇ ಪೊದೆಗಳ ಮಧ್ಯೆ ಹೂತು ಹಾಕಿರುವುದಾಗಿ ತಿಳಿಸಿ ಆ ಜಾಗವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಜಾಗದಲ್ಲಿ ತಲೆಯನ್ನು ಪರಿಶೀಲನೆ ಮಾಡಿ, ಕೊಂಬಿನ ಅಳತೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಕಾಡುಕೋಣವನ್ನು ಬೇಯಿಸಲು ಉಪಯೋಗಿಸಿದ ತಂತಿಯನ್ನು ವಶಕ್ಕೆ ಪಡೆದುಕೊಂಡಿರು ತ್ತಾರೆ ಎಂದರೆ ಸರಿಯಲ್ಲ.

5. ನಂತರ ಕಾಡುಕೋಣದ ಮಾಂಸವನ್ನು ಮಾದರಿಗಾಗಿ ತೆಗೆದು, ಸ್ಟೀಲ್ ಡಬ್ಬಿಯಲ್ಲಿ ಹಾಕಿ ಸೀಲ್ ಮಾಡಿರುತ್ತೇವೆ. ನಂತರ ಕಾಡುಕೋಣದ ದೇಹವನ್ನು ಅಲ್ಲಿಯೇ ಹೊಂಡದಲ್ಲಿ ಹೂತು ಹಾಕಿರು ತ್ತಾರೆ ಎಂದರೆ ಸರಿಯಲ್ಲ. ನಂತರ ವಲಯ ಅರಣ್ಯ ಕಚೇರಿಗೆ ಬಂದು, ಬೆಳಿಗ್ಗೆ 8-00 ರಿಂದ 9-30 ರ ವರಗೆ ಪಂಚನಾ ಮೆಯನ್ನು ಜರುಗಿಸಿರು ತ್ತಾರೆ ಎಂದರೆ ಸರಿಯಲ್ಲ.

6.       ನಂತರ   ವಿಭಾಗ ಕಚೇರಿಗೆ ಆಗಮಿಸಿ  ಮಾನ್ಯ ನ್ಯಾಯಾಲಯದ ಆದೇಶದಂತೆ ಕಾಡುಕೋಣದ ಮಾಂಸ, ತಲೆ, ಕೂದಲು, ಚರ್ಮ ಎಲ್ಲಾ ಸೇರಿಸಿ ಮದ್ಯಾಹ್ನ 12-15 ರಿಂದ 02-25 ರ ವರೆಗೆ ಸುಟ್ಟು ಹಾಕಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 4 ಪೋಟೋದಲ್ಲಿ ನಾನು ಇರುವುದನ್ನು ನೋಡಿ ಗುರುತಿಸಿದ್ದು,   ಆ ಬಗ್ಗೆ ಸ್ಥಳದಲ್ಲಿ  ಪೋಟೊಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ.  ನಾನು  ದಾಖಲೆಗಳನ್ನು ಓದದೇ ಕೆಲವೋಂದು ಬಾರಿ ಸಹಿಯನ್ನು ಮಾಡಿರುತ್ತೇನೆ.  ಒಟ್ಟು ಎಷ್ಟು ಅಂತಹ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.  ನಾನು ಅರಣ್ಯ ಅಭಿವೃದಿಐ ಸಂಘದ ಅಧ್ಯಕ್ಷನಾಗಿರುವುದರಿಂದ ದಾಖಲೆಗಳನ್ನು ಓದಿ ಸಹಿ ಮಾಡುತ್ತೇನೆ ಎಂದರೆ ಸರಿ.   ಸದ್ರಿ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ  ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ. ಎಸ್.ಕೆ.ಎಸ್ ಮತ್ತು ಆರ್.ವಿ.ಜಿ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.